ಇದೆ; ಸ್ವಲ್ಪ ಮಾಡಿಕೋಬಾರದ ಅಂದಿದ್ದು ಪ್ರಯೋಜನವಾಗಿರಲಿಲ್ಲ. ಆ ಸಿಟ್ಟಿಗೆ ಒಂದು ಕೆಲಸ ಮಾಡಿದರು: ಡಾನ್ ಸರಪಳಿಯನ್ನು ಗಂಡನ ಕೈಗೆ ಕೊಟ್ಟು ಜೊತೆಯಲ್ಲಿ ತಿರುಗಾಡಿಸಿಕೊಂಡು ಬನ್ನಿ ಅಂತ ವಹಿಸಿದ್ದರು. ದೀನಪ್ರಸಾದರಿಗೆ ಇದೊಂದು ಅಡ್ಡಿ ಅಂತ ಅನಿಸಿದ್ದು ಆಮೇಲೆ ಒಗ್ಗಿತ್ತು. ಪ್ರಾಣಿಗಳನ್ನು ಸಾಕುವುದು ಅವರಿಗೆ ಅಂತಹ ಆಸಕ್ತಿಯದಾಗಿರಲಿಲ್ಲ. ಚಂದನ ಮನೆಯಿದ್ದ ಹಾಗೆ ನಾಯಿ ಇರುವುದೂ ಪ್ರತಿಷ್ಠೆಯ ಒಂದಂಶ ಅನ್ನುವುದನ್ನು ಅರಿತುಕೊಂಡ ಮೇಲೆ ಹೆಂಡತಿಗೆ ಅಡ್ಡಿ ಮಾಡಿರಲಿಲ್ಲ.

ಗೇಟಿಂದ ಹೊರಬಿದ್ದು ಬಲಕ್ಕೆ ತಿರುಗಿ, ಎರಡು ಮೇನ್‌ಗಳನ್ನು ದಾಟಿ ಎಡಕ್ಕೆ ನೂರು ಮೀಟರು ಹೋದರೆ ಕಾಲನಿ ಮುಗಿದು ಕೆಳವರ್ಗದವರು ವಾಸಿಸುವ ವೀರಾಸಾಮಿ ಬಡಾವಣೆ ಸಿಗುತ್ತದೆ. ಬಾಗಿಲು ತೆರೆದರೆ ರಸ್ತೆಯೆ ಸಿಗುವ ಅಸ್ಬೆಸ್ಟೋಸ್ ಹೊದೆಸಿದ ಮನೆಗಳು, ಎರಡಂತಸ್ತಿನ ಆರ್ಸಿಸಿಯ ಬಾಡಿಗೆಗಾಗಿ ಕಟ್ಟಿದ ಮನೆಗಳು, ಗಿಲಾಯಿ ಮಾಡದ ಇಟ್ಟಂಗಿಯ ಮನೆಗಳು, ಟಾರಪಾಲು ಹೊದೆಸಿದ ಶೆಡ್ಡುಗಳು, ಕಳೆ ಬೆಳೆದು ಕಸ ತುಂಬಿದ ಖಾಲಿ ಸೈಟು ಎಲ್ಲಾ ಅಲ್ಲಿವೆ. ಬೆಳಗ್ಗೆ ದಾರಿಪಕ್ಕದಲ್ಲಿ ಬಿಂದಾಸಾಗಿ ಕುಕ್ಕುರುಗಾಲಲ್ಲಿ ಕುಳಿತು ಹೆಂಗಸರು ಪಾತ್ರೆ ತೊಳೆಯುತ್ತಿದ್ದರು. ರಸ್ತೆಗೆ ತಾಗಿದ್ದ ಕಕ್ಕಸುಗಳಲ್ಲಿ ಭಸ್ಸೆಂದು ನೀರು ಸುರಿಯುವ ಸದ್ದು ಕೇಳುತ್ತಿತ್ತು. ನಲ್ಲಿಯಲ್ಲಿ ನೀರು ಹಿಡಿದುಕೊಳ್ಳುವವರ ಮಾತುಕತೆ, ಬಾಗಿಲಲ್ಲಿ ಕುಳಿತು ಬೀಡಿ ಸೇದುವವರ ಹೊಗೆಯ ಅಲೆ, ಪಕ್ಕದಲ್ಲಿ ಶಾಲೆಯ ಹೋಮ್‌ವರ್ಕ್ ಮಾಡಿಕೊಳ್ಳುವ ಮಕ್ಕಳು, ಮನೆಯೆದುರು ನಿಂತು ಬ್ರಶ್ಶಿನ ಚಲನೆಗೆ ತಕ್ಕಂತೆ ಮುಖ ವಕ್ರ ಮಾಡುತ್ತ ಗಸಗಸ ಹಲ್ಲು ತಿಕ್ಕುತ್ತಿರುವವರು, ತರಕಾರಿ, ತೆಂಗಿನಕಾಯಿ, ಹೂವುಗಳ ತಳ್ಳುಗಾಡಿ ಸಿದ್ಧತೆ ನಡೆಸಿದವರು ಹೀಗೆ ವೈವಿಧ್ಯಮಯ ಚಟುವಟಿಕೆಗಳ ನಡುವೆ ಸರಪಳಿ ಎಳೆಯುತ್ತ ಅತ್ತ ಇತ್ತ ಮೂಸುತ್ತ ನಡೆಯುವ ಡಾನ್, ಅದರ ಹಿಂದೆ ನಡೆಯುವ ದೀನಪ್ರಸಾದ್. ಈ ಕೊಳಚೆಪ್ರದೇಶದ ಮೂಲಕ ತಾನು ವಾಕಿಂಗ್ ಬರುವುದನ್ನು ತಪ್ಪಿಸಬೇಕು ಅಂದುಕೊಳ್ಳುತ್ತಿದ್ದರು. ಆದರೆ, ತಮ್ಮ ಪಾಶ್ ಪ್ರದೇಶದಲ್ಲಿ ಕಾಣಸಿಗದ ಸಹಜ ಲವಲವಿಕೆಯೂ ಜೀವೋನ್ಮಾದವೂ ಇಲ್ಲಿಯ ಜೀವಿಗಳಲ್ಲಿ ಅಲೆಮಾರಿಯಾಗಿರುತ್ತ, ಅವ್ಯಕ್ತ ಸುರಕ್ಷಾಭಾವ ತನ್ನನ್ನು ತಟ್ಟುವ ಭಾಸ ಇಲ್ಲಾಗುತ್ತಿತ್ತು. ಅಷ್ಟೇ ಅಲ್ಲದೆ, ಆ ಜಾಗ ದಾಟಿದ ಮೇಲೆ ಎರಡೂ ಕಡೆ ಅಪಾರ್ಟ್‌ಮೆಂಟುಗಳೆ ಸಾಲಾಗಿದ್ದ ಅಗಲರಸ್ತೆಯ ಗಂಧರ್ವನಗರ ಬಡಾವಣೆ ಸಿಗುತ್ತಿತ್ತು. ಅದನ್ನು ಹಾದು ಮುಖ್ಯರಸ್ತೆ ತಲುಪಿ, ಉಲೂಪಿ ಕೆರೆ ಪಾರ್ಕ್‌ವರೆಗೆ ಹೋಗಿ, ತಿರುಗಿ ಅದೇ ಹಾದಿಯಲ್ಲಿ ಮನೆ ತಲುಪುವಾಗ ಒಂದು ತಾಸಿನ ವಾಕಿಂಗ್ ಆಗಿರುತ್ತಿತ್ತು. ಕೆಲದಿನಗಳ ಹಿಂದೆ ಜೋಡಿಯಾದ ಜಯರಾಮಯ್ಯ ಇವರ ಮಿದುಳಿಗೆ ಕಸರತ್ತು ಕೊಡತೊಡಗಿದ ಮೇಲೆ ಅದೊಂದು ಆಕರ್ಷಣೆಯೊ ಅಥವಾ ಸವಾಲೊ ಅಂತೂ ದಾರಿಯನ್ನು ಬದಲಿಸುವ ಪ್ರಶ್ನೆ ಏಳುವಂತಿರಲಿಲ್ಲ. ಗಂಧರ್ವನಗರದ ನಡುರಸ್ತೆಯಲ್ಲಿ, ‘ದೂರದಿಂದ ಲ್ಯಾಬ್ರಡಾರ್ ಅಂದ್ಕೊಂಡೆ...’ ಅಂತ ಮಾತಿಗೆಳೆದಿದ್ದ ಮೊದಲ ದಿನ. ಬಕ್ಕತಲೆಯ ಉರುಟು ಮುಖ. ಅರವತ್ತರ ಮೇಲೆ ವಯಸ್ಸಾದ ಹಾಗಿತ್ತು. ಸ್ವಲ್ಪ ಸ್ಥೂಲಕಾಯವಾದರೂ ಗಟ್ಟಿಮುಟ್ಟಾದ ದೇಹ. ಗೋಧಿಬಣ್ಣ. ಅವರ ಕೈಯಲ್ಲು ಸರಪಳಿಯಿತ್ತು. ದೀನಪ್ರಸಾದರು ನಾಯಿಗಳ ಜಾತಿ ಬಗ್ಗೆ ಯಾವತ್ತೂ ತಲೆ ಕೆಡಿಸಿಕೊಂಡವರಲ್ಲ. ನಾಯಿ ಅಂದರೆ ನಾಯಿ ಅನ್ನುವ ಮಟ್ಟಿಗೆ ಸ್ವೀಕರಿಸಿಕೊಂಡಿದ್ದವರು. ಈ ಮನುಷ್ಯನ ಕ್ಷುಲ್ಲಕ ಪ್ರಶ್ನೆಯೊಂದು ತನ್ನ ಜ್ಞಾನಭಂಡಾರಕ್ಕೆ ಸವಾಲಾಗಿ ಬಂಡವಾಳ ಹರಾಜಾಗುವುದರಲ್ಲಿದೆ. ಯಾವ ಜಾತಿ ಅಂತ ನೇರ ಪ್ರಶ್ನೆ ಕೇಳಿಬಿಟ್ಟರೆ ಅನ್ನುವ ಭಯದಲ್ಲಿ ಅವರ ಮಾತೆ ಕೇಳಿಸದವರಂತೆ, ‘ನಾನು ದೀನಪ್ರಸಾದ್ ಅಂತ; ನಿವೃತ್ತ ಯೂನಿವರ್ಸಿಟಿ ಪ್ರೊಫೆಸರು. ನೀವು?’ ಅನ್ನುತ್ತ ಕೈ ಮುಂದೆ ಮಾಡಿದರು. ಎದುರಿನವರು ತಮ್ಮ ಮಾತನ್ನು ಅಲ್ಲಿಗೇ ಬಿಟ್ಟು, ‘ನಾನು ಜಯರಾಮಯ್ಯ, ನಿವೃತ್ತ ತಾಶೀಲ್ದಾರ. ಹಾಸನದಲ್ಲಿದ್ದೆ, ಈಗ ನಿವೃತ್ತಿಯ ಅನಂತರ